# ಕಲ್ಕಿ- ಮನರಂಜನೆಗೆ ಮತ್ತೊಂದು ವಾಹಿನಿ

ಈಗಾಗಲೇ ಸಾಕಷ್ಟು ಕನ್ನಡ ಮನರಂಜನಾ ವಾಹಿನಿ ಮತ್ತು ಸುದ್ದಿ ವಾಹಿನಿಗಳು ಚಾಲ್ತಿಯಲ್ಲಿವೆ. ಕನ್ನಡದಲ್ಲೇ ಸಾಕಷ್ಟು ವಾಹಿನಿಗಳು ಪೈಪೋಟಿಗಿಳಿದಿರುವಾಗ, ಕನ್ನಡ ರಾಜ್ಯೋತ್ಸವಕ್ಕೆ ಮತ್ತೊಂದು ಮನರಂಜನಾ ವಾಹಿನಿ 'ಕಲ್ಕಿ ಕನ್ನಡ' ಸೇರ್ಪಡೆಯಾಗಿದೆ. ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗು ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಪ್ರೈ. ಲಿ. ಸಂಸ್ಥೆ 'ಕಲ್ಕಿ ಕನ್ನಡ' ಎಂಬ ನೂತನ ಮನರಂಜನಾ ವಾಹಿನಿ ಪ್ರಸಾರ ಆರಂಭಿಸಿದೆ.

'ಹೊಸ ಯೋಚನೆ ಹಾಗೂ ವಿಭಿನ್ನ ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ಮುಖ್ಯ ಗುರಿ' ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸಂಸ್ಥೆಯ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಪಿ.ಕೈಲಾಸಂ. 'ಈಗಾಗಲೇ ಕರ್ನಾಟಕದಲ್ಲಿ ಸಾಕಷ್ಟು ಮನರಂಜನೆ ವಾಹಿನಿಗಳು ದೊಡ್ಡ ಮಟ್ಟದ ಸ್ಪರ್ಧೆಯನ್ನು ನೀಡುತ್ತಿವೆ. ಇಂತಹ ಒಂದು ಸ್ಪರ್ಧೆಗೆ ಸ್ಪರ್ಧಿಯಾಗಿ ಸಿದ್ಧವಾಗಿದೆ 'ಕಲ್ಕಿ ಕನ್ನಡ'. ಇಲ್ಲಿ ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳು, ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್‌ಡಿ ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರುತ್ತಿದೆ. ಕಳೆದ 3-4 ತಿಂಗಳಿನಿಂದ ಸಂಪೂರ್ಣ ಸಿದ್ಧತೆಯೊಂದಿಗೆ, ಎಲ್ಲ ವರ್ಗದ ವೀಕ್ಷಕರಿಗೆ ಮನರಂಜನೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ರಿಯಾಲಿಟಿ ಶೋಗಳು, ಧಾರಾವಾಹಿಗಳು ನಿಮ್ಮ ಮನ ಮನೆಗೆ ಬರಲಿವೆ' ಎನ್ನುತ್ತಾರೆ ಕೈಲಾಸಂ.



'ಧಾರ್ಮಿಕ, ಆಧ್ಯಾತ್ಮಿಕ, ಚಿಂತನೆಗಳೊಂದಿಗೆ ಭಗವಂತನ ದರ್ಶನ, ಭಾವನೆಗಳಿಗೆ ಜೀವ ತುಂಬುವ, ಕಲ್ಪನೆಗೂ ಮೀರಿದ ಕಥೆಗಳು/ಧಾರಾವಾಹಿಗಳು, ರಿಯಾಲಿಟಿ ಶೋಗಳು ಹೀಗೆ ನಾನಾ ಥರಹದ ರಿಯಾಲಿಟಿ ಶೋಗಳ ಮೂಲಕ ಹೊಸ ಪ್ರತಿಭೆಗಳನ್ನು ಹೆಕ್ಕಿತೆಗೆಯುವ ಒಂದು ವೇದಿಕೆ ಈ ವಾಹಿನಿ ಕಲ್ಪಿಸಿಕೊಡಲಿದೆ. ಹೀಗೆ ಸಾಲು ಸಾಲಾಗಿ ವೀಕ್ಷಕರ ನಾಡಿಮಿಡಿತವನ್ನು ಅರಿತು ವೈವಿಧ್ಯಮಯ ಹಾಗೂ ಸ್ವಂತಿಕೆಯ ಮನರಂಜನೆಯ ಕಾರ್ಯಕ್ರಮಗಳನ್ನು ನೀಡುತ್ತೇವೆ' ಎನ್ನುತ್ತಾರೆ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರು ಬಾಲ್‌ರಾಜ್ ನಾಯ್ಡು.

ಪ್ರತಿದಿನ ಅನುಬಂಧ, ಅಮ್ನೋರು, ಸೇವಂತಿ ಸೇವಂತಿ, ಕಲ್ಕಿ ಎಕ್ಸ್‌ಪ್ರೆಸ್ - ಲಕ್ ಇದ್ರೆ ಲಕ್ಷ್ಮಿ, ಪದ್ದೂಸ್ ಕಿಚನ್, ಪಾನಿಪುರಿ ವಿತ್ ಮುರಳಿ ಟಿ 20 ಲೈವ್, ವಿಶ್ವರೂಪ, ನಮಸ್ತೆ ಕರುನಾಡು, ಅಭಿಶೇಕ ಇನ್ನೂ ವಿವಿಧ ಬಗೆಯ ಕಾರ್ಯಕ್ರಮಗಳು ಈಗಾಗಲೇ ಪ್ರಸಾರವಾಗುತ್ತಿವೆ.